7. ಪ್ರಕಟಣೆ

ಚೇರ್ಮನ್: ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಕೆಳಕಂಡ ಸಂದೇಶವು ಬಂದಿರುತ್ತದೆ.

(ಅ) ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನಪರಿಷತ್ತು ದಿನಾಂಕ 4ನೇ ಆಗಸ್ಟ್, 2001ರಂದು ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕ, 2001ನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿರುತ್ತದೆ.

(ಆ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ, ವಿಧಾನ ಪರಿಷತ್ತು ದಿನಾಂಕ 4ನೇ 2001 ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2001ನ್ನು ಅಂಗೀಕರಿಸಿದೆ.

ಛೇರ್ಮನ್: Now, Hon'ble Sri Sadanandagowda to speak. Please tell us something new which every one will share it.

ಶ್ರೀ ಡಿ.ಬಿ.ಸದಾನಂದಗೌಡ(ಸೂಳ್ಯ): ಸನ್ಮಾನ್ಯ ಛೇರ್ಮನ್‌ರವರೆ, ಇವತ್ತಿನ ದಿವಸ ನಮಗೆಲ್ಲಾ ಬಹಳ ಸಂತೋಷವಾಗುತ್ತಿದೆ. ಏಕೆಂದರೆ, ನಾವೆಲ್ಲಾ ನೇಪಾಳ ವಿಧಾನಸಭೆಯಲ್ಲಿ ಮಾತನಾಡುತ್ತಿದ್ದೇವೇನೋ ಎಂದು ನಿಮ್ಮನ್ನು ನೋಡಿ ನಮಗೆ ಅನ್ನಿಸುತ್ತಿದೆ. ಆದ್ದರಿಂದ ತಮಗೆ ಹೃತ್ಪೂರ್ವಕವಾದ ವಂದನೆಗಳನ್ನರ್ಪಿಸುತ್ತೇನೆ.

ಛೇರ್ಮನ್: ಜೀವನದಲ್ಲಿ ಒಂದು ಸಾರಿಯಾದರೂ ಬದಲಾವಣೆ ಇರಬೇಕು.